**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.112/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ |
| ತಂದೆಯ ಹೆಸರು | : | ಹಾಲಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮರಿಗೊಂಡನಹಳ್ಳಿ |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 3

ದಿ: 22-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)**:

1. ಮೃತ ಪರಮೇಶ್ವರಪ್ಪರವರು ನನಗೆ ಪರಿಚಯ ಇದ್ದರು. ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನನಗೆ ಆರೋಪಿತರ ಪರಿಚಯ ಇದೆ. (ಆರೋಪಿತರು ಈ ದಿನ ಗೈರು ಹಾಜರಾಗಿದ್ದು, ಅವರಾನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಅಂತ ಆರೋಪಿತರ ಪರ ವಕೀಲರು ನುಡಿದಿರುತ್ತಾರೆ. ಆ ಮೃತ ದೇಹ ನೋಡಿದಾಗ ಕುತ್ತಿಗೆ ಮೇಲೆ ಗಾಯವಾಗಿತ್ತು. ಆ ಸಮಯದಲ್ಲಿ ಮೃತರ ಸಂಬಂಧಿಕರು ಬಹಳ ಜನ ಇದ್ದರು. ಪೊಲೀಸರು ಅಲ್ಲಿ ಮೃತ ದೇಹದ ಪಂಚನಾಮೆ ಮಾಡಿರುತ್ತಾರೆ. ನನ್ನ ಜೊತೆ ಆ ದಿನ ಚಾಸಾ-2 ರವರು ಇದ್ದರು.

2. 1 ನೇ ಆರೋಪಿಯ ತಮ್ಮನ ಮಗಳ ಮದುವೆಯ ವಿಚಾರದಲ್ಲಿ 02 ಸಲ ಗಲಾಟೆಯಾಗಿತ್ತು. ಸ್ಥಳದಲ್ಲಿ ಪೊಲೀಸರು ಜರುಗಿಸಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು

ನಿಪಿ-2 ಅಂತ, ಸಾಕ್ಷಿ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಆ ಶವ ಪಂಚನಾಮೆಯನ್ನು ದಿಃ 05-01-2017 ರಂದು ಮಾಡಲಾಯಿತು. ಆರೋಪಿತರೇ ಮೃತ ಪರಮೇಶ್ವರಪ್ಪರವರ ಸಾವಿಗೆ ಕಾರಣ ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

3. ಶವ ಪಂಚನಾಮೆ ಮಾಡುವ ಕಾಲಕ್ಕೆ ತುಂಬಾ ಜನ ಸೇರಿದ್ದರು ಅವರ ಹೆಸರು ಹೇಳಲಾಗುವುದಿಲ್ಲ. ಆ ಗಲಾಟೆಯಲ್ಲಿ ನಾವು ಇದ್ದೆವು. ಪಂಚಾಯಿತಿ ನಡೆದ ಬಗ್ಗೆ ಬರವಣಿಗೆ ಮಾಡಿರುವುದಿಲ್ಲ. ಶವ ಪಂಚನಾಮೆಯನ್ನು 3.00 ರಿಂದ 4.00 ಗಂಟೆಯವರೆಗೆ ಮಾಡಿದರು. ನಾವು ಶವ ಪಂಚನಾಮೆಗೆ ಭಾಗವಹಿಸಿಲ್ಲ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ಪರಮೇಶ್ವರಪ್ಪರವರ ಸಾವಿಗೆ ಮತ್ತು ಗಲಾಟೆ ಏನೂ ಸಂಬಂಧ ಇಲ್ಲ ಅಂದರೆ ಸುಳ್ಳು. ಪಂಚನಾಮೆಯಲ್ಲಿ ಏನೆನು ಬರೆದಿದೆ ಅಂತ ನನಗೆ ಹೇಳಲು ಆಗುವುದಿಲ್ಲ. ಆ ಪಂಚನಾಮೆಯನ್ನು ನ್ಯಾಮತಿ ಪೊಲೀಸರು ಬರೆದರು, ಅವರ ಹೆಸರು ಹೇಳಲು ಆಗುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.